ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
ಸಿ.ಸಿ.902/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಾಗರ್ ಸಿ.ಎಸ್. | ಪಿ.ಡಬ್ಲ್ಯೂ.4 |
| ತಂದೆಯ ಹೆಸರು | : | ಶೇಖರ್ | ಸಿ.ಡಬ್ಲ್ಯೂ.5 |
| ವಯಸ್ಸು | : | 28 ವರ್ಷ | |
| ವೃತ್ತಿ | : | ಪಿ.ಸಿ.137, ಮಲ್ಲಂದೂರು ಪೊಲೀಸ್ ಠಾಣೆ | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 10-06-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು ಸೆಪ್ಟೆಂಬರ್ 2021 ರಿಂದ ದಿಃ01.02.2024 ರವರೆಗೆ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ26.03.2023 ರಂದು ರಾತ್ರಿಃ10.00 ಗಂಟೆಗೆ ರಾತ್ರಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ರಾತ್ರಿಃ10.30 ಗಂಟೆಗೆ ಚಾಸಾ-1 ರವರು ಎ.ಐ.ಟಿ ವೃತ್ತದಲ್ಲಿ ಜೀಪ್ ಹಾಗೂ ಮಾರುತಿ 800 ಕಾರಿನ ನಡುವೆ ಅಪಘಾತ ಆಗಿರುವ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಮಾರುತಿ ಕಾರಿನಲ್ಲಿ ಮದ್ಯ ಇದ್ದ ಬಗ್ಗೆ ತಿಳಿಸಿರುತ್ತಾರೆ. ನಂತರ ನಾನು ಹಾಗೂ ಚಾಸಾ-1 ರವರು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ಸ್ಥಳದಲ್ಲಿ ಸಾರ್ವಜನಿಕರು ಗುಂಪಾಗಿ ಸೇರಿದ್ದರು. ಸದರಿ ಸ್ಥಳದಲ್ಲಿ ಜೀಪು ಇರಲಿಲ್ಲ. ಸ್ಥಳದಲ್ಲಿ ಮಾರುತಿ 800 ಕಾರು ಇತ್ತು. ರಸ್ತೆಯಲ್ಲಿ

ಓಲ್ಡ್ ಟವರಿನ್ 180 ಎಂ.ಎಲ್.ನ ಪೌಚುಗಳು ಬಿದ್ದಿದ್ದವು. 7 ಮದ್ಯದ ಬಾಕ್ಸ್ ಗಳು ಬಿದ್ದಿದ್ದವು. ಸದರಿ ಕಾರಿನ ಚಾಲಕನೂ ಕೂಡಾ ಸ್ಥಳದಲ್ಲಿ ಇದ್ದನು. ಸಾರ್ವಜನಿಕರು ಆತನನ್ನು ಗೆರಾವು ಮಾಡಿದ್ದರು. ಆಗ ಚಾಸಾ-1 ರವರು ಸದರಿ ಚಾಲಕನನ್ನು ನನ್ನ ಜೊತೆಗೆ ಠಾಣೆಗೆ ಕಳುಹಿಸಿರುತ್ತಾರೆ. ನಾನು ಆತನನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತೇನೆ.

ರಾತ್ರಿ ಅಂದಾಜು 12.40 ಗಂಟೆಗೆ ಚಾಸಾ-1 ರವರು ಠಾಣೆಗೆ ವಾಪಾಸಾಗಿರುತ್ತಾರೆ. ಚಾಸಾ-1 ರವರು ಸದರಿ ಚಾಲಕನನ್ನು ವಿಚಾರಿಸಿದಾಗ ಆತನು ತನ್ನ ಹೆಸರು ಮಂಜುನಾಥ್ ಬಿನ್ ಕಲ್ಲೇಶ್ ಎಂದು ತಿಳಿಸಿರುತ್ತಾನೆ. ಆತನ ಬಳಿ ಮದ್ಯ ಸಾಗಾಣಿಕೆ ಮಾಡಲು ಪರವಾನಗಿ ಇದೆಯೇ ಎಂದು ಕೇಳಲಾಗಿ ಆತ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ. ಆತನು ಊರಿನಲ್ಲಿ ಹಬ್ಬ ಇದ್ದ ಕಾರಣ ಸದರಿ ಮದ್ಯವನ್ನು ಸಾಗಾಟ ಮಾಡುವುದಾಗಿ ತಿಳಿಸಿರುತ್ತಾನೆ. ನಂತರ ಚಾಸಾ-1 ರವರು ತಮ್ಮ ಸ್ವ ದೂರಿನ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಈ ಬಗ್ಗೆ ನಾನು ಚಾಸಾ-1 ರವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ದಿನ ಘಟನಾ ಸ್ಥಳದಲ್ಲಿ ಇದ್ದ 2 ರಟ್ಟಿನ ಬಾಕ್ಸ್ ಗಳು ಹಾಗೂ ಮದ್ಯದ ಪೌಚುಗಳನ್ನು ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಸದರಿ ದಿನ ಘಟನಾ ಸ್ಥಳದಲ್ಲಿ ಇದ್ದ ವಾಹನದ ಭಾವಚಿತ್ರವನ್ನು ನೋಡಿ ಗುರುತಿಸುತ್ತೇನೆ. ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿತ್ತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಈ ದಿನ ಆರೋಪಿಯು

ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು ಆತತನ್ನು ಗುರುತಿಸುವಲ್ಲಿ ತಮ್ಮ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ).

<u>ಪಾಟೀ ಸವಾಲುಃ ಆರೋಪಿ ಪರಃ ವಕೀಲರಿಂದಃ-</u>

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ